## ಮಾಸ್ತಿ ಪರಿಚಯ ವಿಶಿಷ್ಟ

ಚಂದನ ವಾಹಿನಿಯಲ್ಲಿ ನಾಡಿನ ಹಿರಿಯ ಲೇಖಕರನ್ನು, ಕವಿಗಳನ್ನು, ಕಲಾವಿದರನ್ನು ಕರೆದು ಪರಿಚಯಿಸುವ ಸುಂದರ ಕಾರ್ಯಕ್ರಮಗಳು ಶುಭೋದಯ ಕರ್ನಾಟಕ ಕಾರ್ಯಕ್ರಮದಲ್ಲಿ ಪ್ರಸಾರವಾಗುತ್ತಿವೆ. ಈ ವಾರದಲ್ಲಿ ನೆನಪಿನಂಗಳ ಕನ್ನಡದ ಪ್ರಸಿದ್ಧ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರ ಪರಿಚಯಾತ್ಮಕ ಸಂದರ್ಶನದ ತುಣುಕುಗಳನ್ನು ತೋರಿಸಲಾಯಿತು. ಸಣ್ಣ ಕಥೆಯ ಜನಕ ಮಾಸ್ತಿ 'ಕನ್ನಡದ ಆಸ್ತಿ' ಎಂದೇ ಪ್ರಸಿದ್ಧರು. ಸಣ್ಣ ಕಥೆಯ ಜೊತೆ, ಕಾದಂಬರಿ, ನಾಟಕ, ಜೀವನ ಚರಿತ್ರೆ ಹೀಗೆ ಅನೇಕ ಸಾಹಿತ್ಯ ಪ್ರಕಾರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು.

ಯು.ಆರ್. ಅನಂತಮೂರ್ತಿ ಅವರನ್ನು ಸಂದರ್ಶಿಸಿ ಸಣ್ಣ ಕಥೆಗಳ ಬಗ್ಗೆ, ಅದರ ಸಾಧ್ಯಾ ಸಾಧ್ಯತೆಗಳ ಕುರಿತು ಚರ್ಚಿಸಲಾಯಿತು. ಮಾಸ್ತಿಯವರು ತಮ್ಮ ಸಣ್ಣಕಥೆಯ ಕುರಿತು 'ಸಣ್ಣ ಕಥೆಯ ಮೂಲಕವೇ ಜೀವನ ದರ್ಶನ ಮಾಡಿಸಲು ಸಾಧ್ಯ. ಬೇರೆ ಪ್ರಕಾರಕ್ಕಿಂತಲೂ ಈ ಪ್ರಕಾರ ಜನರನ್ನು ಮುಟ್ಟುವಲ್ಲಿ ಅತೀ ಯಶಸ್ಸನ್ನು ಸಾಧಿಸಿದೆ. ಒಂದು ದೊಡ್ಡ ಸಾಹಿತ್ಯ ಕೃತಿ ಹೇಳಬಹುದಾದ ಜೀವನ ತತ್ವ, ಸಂದೇಶಗಳನ್ನು ಸಣ್ಣಕತೆಯ ಮೂಲಕ ಹೆಚ್ಚು ಪರಿಣಾಮಕಾರಿಯಾಗಿ ಓದುಗರಿಗೆ ತಲುಪಿಸಬಹುದಾಗಿದೆ' ಎಂದು ಹೇಳಿದ ಮಾತುಗಳು ತುಂಬಾ ಮೌಲಿಕವಾಗಿವೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ರಾಜಕಾರಣಿಗಳ ಪ್ರವೇಶ ಆಗಲಿ

ಕಲರ್ಸ್ ಬಿಗ್‌ಬಾಸ್ ಮನೆಗೆ ಕನ್ನಡದ ನಟ, ನಟಿಯರಿಗೆ ಪ್ರವೇಶ ಲಭಿಸುತ್ತದೆ. ಸ್ವಾಮಿಗಳಿಗೆ ಹಾಗೂ ಪತ್ರಕರ್ತರಿರೂ ಪ್ರವೇಶ ಮಾಡಿದ್ದಾರೆ. ಆದರೆ ರಾಜ್ಯದ ರಾಜಕಾರಣಿಗಳಿಗೆ ಈವರೆಗೂ ಪ್ರವೇಶ ಸಿಕ್ಕಿಲ್ಲ. ರಾಜ್ಯದ ರಾಜಕಾರಣದಲ್ಲಿ ಬಗೆ ಬಗೆಯ ಮನೋರಂಜನೆ ಮತದಾರರಿಗೆ ಉಪ ಚುನಾವಣೆ ನಿಮಿತ್ತ ಲಭಿಸುತ್ತಿದೆ. ಅಪ್ಪನ ಆಣೆ, ದೇವರ ಆಣೆ, ನಾಲಿಗೆ ಬಿಗಿ ಹಿಡಿದು ಮಾತನಾಡಲಿ, ತಲೆ ಸರಿ ಇಲ್ಲ, ಆಸ್ಪತ್ರೆಗೆ ಸೇರಿ ಚಿಕಿತ್ಸೆ ಮಾಡಿಸಿಕೊಳ್ಳಲಿ... ಇತ್ಯಾದಿ ಮುತ್ತುಗಳು, ಅಣಿ ಮುತ್ತುಗಳು ನಮ್ಮ ರಾಜಕಾರಣಿಗಳಿಂದ ನಿತ್ಯ ಪ್ರಚಾರ ಸಭೆಯಲ್ಲಿ ಉದುರುತ್ತವೆ. ಅವುಗಳನ್ನು ಆಲಿಸುವ ದೌರ್ಭಾಗ್ಯ ಮತದಾರರಿಗೆ ದೊರೆಯುತ್ತದೆ. ಮಾತ್ರವಲ್ಲ ಈಚೆಗೆ ಮಾಜಿ ಮುಖ್ಯಮಂತ್ರಿಗಳು ಕಣ್ಣೀರು ಸುರಿಸಿದ್ದಾರೆ, ಮತದಾರರ ಅನುಕಂಪ ದೊರೆಯಲೆಂದು.

ಆದುದರಿಂದ ಬಿಗ್ ಬಾಸ್ ಮನೆಗೆ ತಡವಾದರೂ ಚಿಂತೆ ಇಲ್ಲ. ರಾಜಕಾರಣಿಗಳಿಗೆ ಪ್ರವೇಶ ಲಭಿಸಲಿ. ಅವರ ಭೀಕರ ಭಾಷಣ, ನಾಟಕ ನೋಡುವ ಅವಕಾಶ ಜೀ ಕಲರ್ಸ್ ಕನ್ನಡ ವಾಹಿನಿಯ ಪ್ರೇಕ್ಷಕರಿಗೆ ದೊರೆಯಲಿ.

—ಸದಾನಂದ ಹೆಗಡೆಕಟ್ಟೆ, ಮೂಡುಬಿದಿರೆ

ವಾರದ ಪತ್ರ

## ಕಾಮಿಡಿಯಲ್ಲಿ ಹೊಸತನ

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ತನ್ನ ಪ್ರಯೋಗಗಳ ದೃಷ್ಟಿಯಿಂದ ಗಮನ ಸೆಳೆಯುವಂತಿತ್ತು. ಮೋಗ್ಲಿಯ 'ಜಂಗಲ್ ಬುಕ್'ಅನ್ನು ತೆರೆಯ ಮೇಲೆ ತರುವ ಪ್ರಯತ್ನ ಒಂದೆಡೆಗೆ ನೂತನವೆನಿಸಿದರೆ, ಕಲಾವಿದರ ಡಬ್ಬಿಂಗ್ ಪ್ರತಿಭೆ ಒರೆಗೆ ಹಚ್ಚುವ ಪ್ರಯತ್ನ ಇನ್ನೊಂದೆಡೆಗೆ ಸಫಲವಾಯಿತೆಂದೇ ಹೇಳಬಹುದು.

ಜಗವನ್ನು ನಾಟಕರಂಗವೆಂದು ನಂಬುವ ನಮಗೆ ಸಾಮಾನ್ಯವಾಗಿ ಸಿಗುವುದು ಒಂದೇ ಪಾತ್ರ; ಆದರೆ ಕಲಾವಿದರಿಗೆ ನೂರಾರು ಪಾತ್ರ ಸಿಗುತ್ತದೆ. ಒಂದೇ ಜನ್ಮದಲ್ಲಿ ಹಲವು ಪಾತ್ರಗಳನ್ನು ನಿರ್ವಹಿಸುವ ಅವಕಾಶ ಕಲಾವಿದರಿಗೆ ಮಾತ್ರ ಎಂದ ಅಪ್ರತಿಮ ಡಬ್ಬಿಂಗ್ ಕಲಾವಿದ, ನವರಸ ನಾಯಕ ಜಗ್ಗೇಶ್ ಅವರ ಮಾತು ನಿಜವೆನ್ನಿಸಿತು.

ಇದೇ ಸಂದರ್ಭದಲ್ಲಿ ಬಹಳ ಹಿಂದೆ ಜಗ್ಗೇಶ್ ತಾವು ಒಬ್ಬ ಬಾಲ ನಟಿ ಮುಂದೊಂದು ದಿನ ದೊಡ್ಡ ಕಲಾವಿದೆಯಾಗುತ್ತಾಳೆ ಎಂದು ನುಡಿದ ಭವಿಷ್ಯ ನಿಜವಾಗಿದೆ; ಅವಳೇ 'ಗಟ್ಟಿಮೇಳ'ದ ಅಮೂಲ್ಯ ಎಂದು ಪ್ರಕಟಿಸಿದಾಗ ಹೆಮ್ಮೆಯಾಯಿತು.

—ವಾ. ಮುರಳೀಧರ, ತೀರ್ಥಹಳ್ಳಿ

## ಹೀಗೊಂದು ರೂಪಕ

ಇತ್ತೀಚೆಗೆ ಸಂಬಂಧಿಕರು ಯಾವುದೋ ಕಾರ್ಯಕ್ರಮಕ್ಕೆ ಹೊರಟಿದ್ದರು.

ಹೆಂಡತಿ ಕೇಳಿದಳು: ಸಂಜೆ ಬರೋದು ಎಷ್ಟು ಹೊತ್ತಾಗಬಹುದು? ಗಂಡ ಹೇಳಿದ: ಕಾರ್ಯಕ್ರಮ 'ಮಗಳು ಜಾನಕಿ' ತರಹ ಇದ್ದರೆ ರಾತ್ರಿ ಹೊತ್ತಿಗೆ ಬರುತ್ತೇನೆ, 'ಮಂಗಳ ಗೌರಿ ಮದುವೆ' ತರಹ ಇದ್ದರೆ ಮಧ್ಯಾಹ್ನದ ಹೊತ್ತಿಗೆಲ್ಲ ಬಂದುಬಿಡುತ್ತೇನೆ. ಈ ಒಂದು ಸಣ್ಣ ನಿದರ್ಶನ ಎರಡೂ ಧಾರಾವಾಹಿಗಳ ಗುಣಮಟ್ಟವನ್ನು ಸೂಚ್ಯವಾಗಿ ತಿಳಿಸುತ್ತದೆಯಲ್ಲವೆ?

—ಶ್ರೀಧರ್ ಬೆಂಗಳೂರು

## ಕುರಿಯ ಪ್ರತಾಪ

ಕಲರ್ಸ್‌ನ 'ಬಿಗ್‌ಬಾಸ್'ನಲ್ಲಿ ಚೆಂಡು ಎಸೆಯುವ ಪಂದ್ಯದಲ್ಲಿ ವಾಸುಕಿ ಎಸೆದ ಚೆಂಡು ಅಕಸ್ಮಾತ್ ಕುರಿ ಪ್ರತಾಪ್ ಬೆನ್ನಿಗೆ ಮೆತ್ತಗೆ ಬಿದ್ದಿತು. ತಕ್ಷಣ ವಾಸುಕಿ ಕ್ಷಮೆ ಕೇಳಿ ಆಟದ ಕಡೆ ಗಮನ ಕೊಟ್ಟರು. ಆದರೆ ತಕ್ಷಣ ಕುರಿ ಪ್ರತಾಪ್ ಚೆಂಡಿನಲ್ಲಿ ಅಮಾಯಕ ವಾಸುಕಿಯ ತಲೆಯ ಹಿಂಭಾಗಕ್ಕೆ ಬೀಸಿ ಹೊಡೆದರು. ತಕ್ಷಣ ವಾಸುಕಿ ನೋವಿನಿಂದ ತಲೆ ಒತ್ತಿ ಹಿಡಿದರು. ಆಗ ಕುರಿ ಓಡಿಬಂದು ಸಾರಿ ಸಾರಿ ಎಂದು ಕ್ಷಮೆ ಕೇಳುವ ನಾಟಕ ಆಡಿದರು ಎಂದರೆ ತಪ್ಪಲ್ಲ. ಬಿಗ್‌ಬಾಸ್ ಕೃಪೆ ತನ್ನ ಮೇಲೆ ಇದೆ ಎಂದು, ನಾನು ಏನು ಮಾಡಿದರೂ ನಡೆಯುತ್ತದೆ ಎಂದು ಕುರಿ ಆ ರೀತಿ ಅಮಾಯಕನಿಗೆ ಹೊಡೆದಿದ್ದು ತಪ್ಪು ಎಂಬುದು ನನ್ನ ಭಾವನೆ.

— ಎನ್.ಎಸ್. ಚಂದ್ರಶೇಖರ್

## 'ಅಗ್ನಿ ಸಾಕ್ಷಿ' ಕೆಲವು ಪ್ರಶ್ನೆಗಳು

ಕಲರ್ಸ್‌ನ 'ಅಗ್ನಿ ಸಾಕ್ಷಿ'ಗೆ ಚಂದ್ರಿಕಾ ಅಟ್ಟಹಾಸದಲ್ಲಿ ಮೆರೆದು ಕೊನೆಗೂ ಕಂಬಿ ಎಣಿಸಲು ತೆರಳಿದ್ದಾಳೆ. ಈಗ ಈ ಪ್ರಮೀಳಾ ಹುಟ್ಟಿಕೊಂಡಿದ್ದಾಳೆ. ಇವಳ ಅಟ್ಟಹಾಸ ಅವಳಿಗಿಂತ ಹೆಚ್ಚು. ಮಗ ಮದುವೆಯಾದ ಹುಡುಗಿ ಮತ್ತು ಅವಳ ಮನೆಯವರಿಗೆ ಇಂತಹ ಹಿಂಸೆ ಕೊಡಲು ಸಾಧ್ಯವೇ? ವಾಸುದೇವ ಅವರ ಕುಟುಂಬ ಅವಮಾನ ಅನುಭವಿಸುವುದು ಯಾವ ಪುರುಷಾರ್ಥಕ್ಕೆ? ಇಂತಹ ಕೀಳು ಅಭಿರುಚಿಯ ಧಾರಾವಾಹಿಗಳನ್ನು ಹೆಣೆಯುತ್ತಾ ಹೋಗುವವರಿಗೆ ಕೊನೆ ಇಲ್ಲವೇ? ಇದೊಂದು ಧಾರಾವಾಹಿಯ ಕಥೆಯಲ್ಲ.

—ಗಾಯತ್ರಿ

## ಟೀವಿ ಆಫ್ ಮಾಡಬೇಕೆನಿಸಿದೆ

ಬರಬರುತ್ತ ಮಿಕ್ಕೆಲ್ಲ ಧಾರಾವಾಹಿಗಳನ್ನು ಮೀರುವ ರೀತಿಯಲ್ಲಿ, ನಮ್ಮ 'ಮಗಳು ಜಾನಕಿ' ಸ್ಪರ್ಧೆಗಿಳಿದಿದ್ದಾಳೆ. ಕತೆಯ ಓಟದಲ್ಲಿ ವೇಗವಿಲ್ಲ, ಹೆಜ್ಜೆ ತಪ್ಪುತ್ತಿದ್ದಾಳೆ. ಸೀತಾರಾಂ ಅವರ ಹಿಡಿತ ಮೀರಿ ಕತೆ ಓಡುತ್ತಿದೆ ಎಂಬ ಭಾವನೆ ಬರುತ್ತಿದೆ. ಚಿರಂತನ ಪ್ರಕರಣವನ್ನು ಹಿಂಜಿ ಹಿಂಜಿ, ವೀಕ್ಷಕರ ತಲೆ ಚಿಟ್ಟು ಹಿಡಿಯುವಂತೆ ಮಾಡಲಾಗಿದೆ. ಡಿವೈಎಸ್ಪಿ ಜಾನಕಿಗೆ ಇಲಾಖೆಯ ಕೆಲಸಕ್ಕಿಂತ ಮನೆ ಮಂದಿಯ ಕೆಲಸವೇ ಮುಖ್ಯವಾಗಿದೆ. ಧಾತ್ರಿ–ಮಧು ಮದುವೆ, ನಿರಂಜನನ ಉದ್ಯೋಗ ಸುರಳಿತಗೊಳಿಸುವುದು, ಮತ್ತೆ ಮತ್ತೆ ಶಾಮಲಾ ಮತ್ತು ಆಕೆ ಗಂಡನ ಪೀಕಲಾಟಗಳನ್ನು ನೋಡಿ ನೋಡಿ ಸಾಕಾಗಿದೆ.

—ಮಲ್ಲಿಕಾರ್ಜುನ ಹುಲಗಬಾಳಿ ಬನಹಟ್ಟಿ

## 'ಥಟ್'ನ ನ್ಯೂನತೆಗಳು

ಚಂದನದಲ್ಲಿ ನ. 21ರ 'ಥಟ್...' ತೀರ್ಪು ಬೇಸರ ತಂದಿತು. ಬಂಪರ್ ಪ್ರಶ್ನೆಗೆ ಶಶಾಂಕ್ ಸುಳಿವು ಪಡೆಯದೆ ಥಟ್ ಎಂದು 'ದೇವನೂರ ಮಹಾದೇವಪ್ಪ' ಎಂದರು. ಸುಳಿವು ಉಪಯೋಗಿಸಿಕೊಂಡ ಪಾರ್ವತಿ, ಶಶಾಂಕ್ ಉತ್ತರದ ಮೇಲೆ 'ದೇವನೂರ ಮಹಾದೇವ' ಉತ್ತರ ನೀಡಿ ಪುಸ್ತಕ ಗಿಟ್ಟಿಸಿಕೊಂಡರು. ಸ್ವಂತ ವಿವೇಚನೆಯಿಂದ ಶಶಾಂಕ್‌ಗೆ ಬಹುಮಾನ ಕೊಡಬಹುದಿತ್ತು.

—ಎ. ಶಾಂತಮ್ಮ, ಬೆಂಗಳೂರು